# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.251/2020 ಡಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಬಸವಣ್ಣ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 05 -03 -2026.** |

**ಪಾಟೀ ಸವಾಲುಃ ವಾದಿ ಪರ ಶ್ರೀ ಜೆ ಎಂ ಎ ವಕೀಲರಿಂದಃ**

ದಾವಾ ಶೆಡ್ಯುಲ್ ಸ್ವತ್ತು ಸರ್ವೆ ನಂಬರ್ 152 ರಲ್ಲಿ ಇರುವ 2 ಎಕರೆ 20 ಗಂಟೆ ಹೊಸಕೋಟೆ ಮಸ್ಕೆ ಗ್ರಾಮದಲ್ಲಿ ಕಸಬಾ ಹೋಬಳಿ ನಂಜನಗೂಡು ತಾಲ್ಲೂಕು ಮುತ್ತಮ್ಮ ಮತ್ತು ಮಹದೇವ ಶೆಟ್ಟರವರಿಗೆ ಸೇರಿದ ಆಸ್ತಿ ಆಗಿರುತ್ತದೆ ಎಂದರೆ ಸರಿ. ಸದರಿ ಸ್ವತ್ತು ನನ್ನ ತಂದೆಯವರಿಗೆ ನೊಂದಾಯಿತ ಆಧಾರ ಪತ್ರದ ಮುಖಾಂತರ ನೀಡಿರುತ್ತಾರೆ ಎಂದರೆ ಸರಿ. ಮುತ್ತಮ್ಮ ಮತ್ತು ಮಹದೇವ ಶೆಟ್ಟರವರು ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಮಹದೇವಶಟ್ಟಿ ರವರ ಪತ್ನಿ ವಾದಿ 1 ಮತ್ತು ವಾದಿ 2 ಮತ್ತು 3 ರವರ ಅವರ ಮಕ್ಕಳು ಆಗಿರುತ್ತಾರೆ ಎಂದರೆ ಸರಿ. ನನ್ನ ತಂದೆಯವರು ಕೂಡ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆಯವರು ಮೃತ ಪಟ್ಟ ನಂತರ ಸದರಿ ದಾವಾ ಷೆಡ್ಯೂಲ್ ಸ್ವತ್ತು ನನ್ನ ಸ್ವಾಧೀನದಲ್ಲಿ ಇದೆ ಎಂದರೆ ಸರಿ. ಆದಾರ ಮಾಡಿದ ನಂತರ ನನ್ನ ತಂದೆಯವರು 1 ಸಾವಿರ ರೂಪಾಯಿಗಳನ್ನು ಸಂದಾಯ ಮಾಡಿರುತ್ತಾರೆ ಎಂದರೆ ಸರಿ. ದಿಃ18-11-1974 ರಲ್ಲಿ ಮೂರು ವರ್ಷಗಳ ಒಳಗೆ ಬಿಡಿಸಿಕೊಳ್ಳಬೇಕು ಎಂಬುದನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿ. ಒಂದು ವೇಳೆ ಹಣ ಕಟ್ಟಿಲ್ಲದಿದ್ದರೆ ಹಣ ಕೊಡುವವರೆಗೆ ಸ್ವಾಧೀನದಲ್ಲಿ ಇಟ್ಟುಕೊಳ್ಳಬಹುದು ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಮಹದೇವಶೆಟ್ಟಿ ರವರು ದಿಃ 19-10-2010 ರಂದು 1 ಸಾವಿರ ರೂಪಾಯಿಗಳನ್ನು ನೀಡಿ ಸ್ವಾಧೀನವನ್ನು ಬಿಟ್ಟುಕೊಡಬೇಕು ಎಂದು ನೋಟೀಸನ್ನು

ನೀಡಿರುತ್ತಾರೆ ಎಂದರೆ ಸರಿ. ನೋಟೀಸ್ ನನಗೆ ಬಂದ ಬಳಿಕ ದುಡ್ಡನ್ನು ಪಡೆದುಕೊಂಡು ನಾನು ಅವರ ಸ್ವಾಧೀನಕ್ಕೆ ನೀಡಿರುವುದಿಲ್ಲ ಎಂದರೆ ಸರಿ. ನಾನು ಈ ನ್ಯಾಯಾಲದಲ್ಲಿ ವಾದಿಯ ವಿರುದ್ದ ಅಸಲು ದಾವಾ ಸಂಖ್ಯೆ 85/2012 ಎಂದು ದಾವಾ ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ನಿಗದಿತ ಅವದಿಯಲ್ಲಿ ಬಿಡಿಸಿಕೊಳ್ಳದೇ ಇರುವ ಕಾರಣದಿಂದ ನಾನೇ ಮಾಲಿಕತ್ವ ಮತ್ತು ಸ್ವಾಧಿನಾನುಭವವನ್ನು ಹೊಂದಿರುತ್ತೇನೆ ಎಂದು ಕೋರಿಕೊಂಡಿರುತ್ತೇನೆ ಎಂದರೆ ಸರಿ. ಮತ್ತು ಸದರಿ ದಾವೆಯಲ್ಲಿ ಸ್ವಾಧೀನಾನುಭವಕ್ಕೆ ತೊಂದರೆ ಕೊಡಬಾರದು ಎಂದು ತೀರ್ಪು ಆಗಿರುತ್ತದೆ ಎಂದರೆ ಸರಿ. ನೀವು ಮಾಲೀಕರು ಅಲ್ಲ ಎಂದು ತೀರ್ಪು ಆದ ಮೇಲೆ ನೀವು ಮೇಲ್ಮನವಿಯನ್ನು ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ನಾನು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿ ಆರ್ ಎ 32/2020 ಹಿರಿಯ ಶ್ರೇಣಿ ನ್ಯಾಯಾದೀಶರ ನ್ಯಾಯಲಯದಲ್ಲಿ ಮೆಲ್ಮನವಿ ವಜಾ ಗೊಂಡಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸದರಿ ದಾವೆಗೆ ಸಂಬಂದಪಟ್ಟಂತೆ ಮಾನ್ಯ ಉಚ್ಚ ನ್ಯಾಯಾಲದಲ್ಲಿ ಕೂಡ ದಾವೆಯಲ್ಲಿ ಸಲ್ಲಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ನಾನು ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಮಾನ್ಯ ಉಚ್ಚ ನ್ಯಾಯಾಲದಲ್ಲಿ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ ಮತ್ತು ನಂಜನಗೂಡಿನ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿಯೇ ಅಂತಿಮ ತೀರ್ಪು ಆಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಮಾನ್ಯ ಉಚ್ಚ ನ್ಯಾಯಾಲದಲ್ಲಿ ದಾವೆಯನ್ನು ಸಲ್ಲಿಸಿರುತ್ತೇನೆ ಆದರೆ ಮಾನ್ಯ ಉಚ್ಚ ನ್ಯಾಯಾಲವು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿಯೇ ಇತ್ಯರ್ಥ ಮಾಡಿಕೊಳ್ಳಿ ಎಂದು ಆದೇಶ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮಾನ್ಯ ಉಚ್ಚ ನ್ಯಾಯಾಲದಲ್ಲಿ ಸದರಿ ಆದೇಶ ನೀಡಿರುತ್ತದೆ ಎಂಬದರ ಬಗ್ಗೆ ದಾಖಲೆಗಳನ್ನು ನೋಡಿರುವಿರಾ ಮತ್ತು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಲು ಯಾವುದೇ ತೊಂದರೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ದಾಖಲೆಗಳನ್ನು ನೋಡಿರುತ್ತೇನೆ ಮತ್ತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ನೀವು ಹೇಳಿದ ರೀತಿಯಲ್ಲಿ ಮಾನ್ಯ ಉಚ್ಚ

ನ್ಯಾಯಾಲವು ಯಾವುದೇ ಆದೇಶವನ್ನು ನೀಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಮಾನ್ಯ ಉಚ್ಛ ನ್ಯಾಯಾಲಯವು ಆದೇಶವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮುತ್ತಮ್ಮ ಮತ್ತು ಮಹದೇವಶೆಟ್ಟಿ ರವರು ನಿಮ್ಮ ತಂದೆಯವರಿಗೆ ಅಧಾರ ಮಾಡಿದ ಅಸ್ತಿಯನ್ನು ಮಾರಾಟ ಮಾಡುತ್ತೇವೆ ಎಂದು ಹೇಳಿರುತ್ತಾರೆ ಎಂಬ ಬಗ್ಗೆ ದಾಖಲೆ ಇವೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ದಾಖಲೆಗಳು ಇರುವುದಿಲ್ಲ ಬಾಯಿ ಮಾತಿನಲ್ಲಿಯೇ ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ನಿಮ್ಮ ತಂದೆಯವರು ಮತ್ತು ನೀವು 19 ಸಾವಿರ ರೂಪಾಯಿಗಳನ್ನು ಪಡೆದುಕೊಂಡಿರುವಿರಾ ಇದಕ್ಕೆ ಸಂಬಂದಪಟ್ಟ ದಾಖಲೆ ಇವೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ದಾಖಲೆಗಳು ಇರುವುದಿಲ್ಲ ಬಾಯಿ ಮಾತಿನಲ್ಲಿಯೇ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಯಾವುದೇ ಬಗೆಯ ಮಾರಾಟ ಕೂಡ ಆಗಿರುವುದಿಲ್ಲ ಮತ್ತು ಯಾವುದೇ ರೀತಿಯ ಹಣ ಸಂದಾಯ ಕೂಡ ಆಗಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಹಣವನ್ನು ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನೋಟೀಸು ಕೊಟ್ಟ ಬಳಿಕ ನಾನು ಈ ಸುಳ್ಳು ಕಥೆಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾವಿರ ರೂಪಾಯಿಗಳ ಹಣವನ್ನು ಪಡೆದುಕೊಂಡು ಜಮೀನನ್ನು ವಾದಿಯವರಿಗೆ ನಾನು ಸದರಿ ಜಮೀನನ್ನು ಬಿಟ್ಟು ಕೊಡಲು ಬಾಧ್ಯಸ್ಥನಾಗಿರುತ್ತೇನೆ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ಸ್ವತ್ತಿಗೆ ಖರ್ಚು ಮಾಡಿರುತ್ತೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಬಳಿ ಕಂದಾಯದ ರಸೀದಿ ಇರುತ್ತದೆ ಎಂದು ನುಡಿಯುತ್ತಾರೆ. ಜಮೀನು ಬಿಟ್ಟು ಕೊಡಬೇಕಾಗುತ್ತದೆ ಎಂಬ ಕಾರಣದಿಂದ ನಾನು ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**